

**ಕೂಡು ಕುಟುಂಬದಲ್ಲಿ ಕೆಲವು ಅತ್ತೆಯರಿಗೆ, ಎಲ್ಲವೂ ತಾನು ಹೇಳಿದಂತೆ ನಡೆಯಬೇಕೆನ್ನುವ ಸ್ವಭಾವ ಇರುತ್ತದೆ. ಜಾಣ ಸೊಸೆಯರಿದ್ದರೆ, ಅತ್ತೆಯ ಮನಸ್ಸಿನ ವಿಚಾರವನ್ನು ತಿಳಿದುಕೊಂಡು ಹೊಂದಿಕೊಂಡು ಹೋದರೆ ಅರ್ಧ ಕಷ್ಟ ಪರಿಹಾರವಾಗಿ ಬಿಡುತ್ತದೆ.**

ಅಂಶಗಳತ್ತ ಗಮನಹರಿಸಿ. ಆಫೀಸ್ ರಗಳೆಯನ್ನು ಮನೆಯಲ್ಲಿ ತರಲೇ ಬೇಡಿ. ಒಬ್ಬರಿಗೊಬ್ಬರು ಇಷ್ಟಪಟ್ಟ ವಿಷಯಗಳಷ್ಟೇ ಅಲ್ಲ ಇಷ್ಟಪಡದ ವಿಚಾರದ ಬಗ್ಗೆ ಕೂಡ ಕುಳಿತು ಚರ್ಚಿಸಿಕೊಳ್ಳಿ. ಇಂತಹ ಮಾತುಕತೆಗಳಿಂದ ಸ್ನೇಹ ಗಟ್ಟಿಯಾಗುತ್ತಾ ಹೋಗುತ್ತದೆ. ಬದಲಾಗಿ ಪತ್ನಿ ನಾನು ಕೆಲಸ ಮಾಡುತ್ತೇನೆ ಸಂಬಳ ಬರುತ್ತದೆ. ನಾನೇಕೆ ಎಲ್ಲಾ ಕೆಲಸ ಮಾಡಬೇಕು ಆತನಿಂದ ಸಹಕಾರವೂ ಇಲ್ಲ ಹಾಯಾಗಿ, ಕುಳಿತು ಟಿವಿ ನೋಡುತ್ತಾರೆ. ಇಂತಹ ಮಾತು, ಯೋಚನೆ ಬೇಡವೇ ಬೇಡ.. ನಿಮಗೆ ಕೆಲಸದಲ್ಲಿ ಕಷ್ಟವಾದಾಗ, ಪ್ರೀತಿಯಿಂದ ನಿಮ್ಮ ಪತಿಯನ್ನು ಪ್ರೀತಿಯಿಂದ ಕರೆದರೆ, ಖಂಡಿತಾ ಬರುತ್ತಾನೆ. ಮನೆ ಕೆಲಸಗಳಿಗೆ ಗಂಡನ ಸಹಾಯ ಕೇಳುವುದು ಸರ್ವೇಸಾಮಾನ್ಯ. ಆದ್ದರಿಂದ ನೀವು ಅವರನ್ನು ಪ್ರೀತಿಯಿಂದಲೇ ನಿಮ್ಮ ಕೆಲಸದಲ್ಲಿ ತೊಡಗಿಸಿಕೊಳ್ಳಿ. ಮಾಡುವ ಕೆಲಸದಿಂದ ಎಷ್ಟು ದಣಿವಾಗುತ್ತಿದೆ ಎಂಬುದನ್ನು ಪತಿಗೆ ಸ್ಪಷ್ಟಪಡಿಸಿ. ನಿಮಗೆ ಯಾವ ರೀತಿಯಲ್ಲಿ ಸಹಾಯ ಮಾಡಬಹುದು ಎಂಬುದನ್ನು ತಿಳಿದು ಚಿಕ್ಕ ಚಿಕ್ಕ ಕೆಲಸಗಳನ್ನು ಮಾಡಿದರೂ ಸರಿಯೇ ನಿಮಗೆ ಎಷ್ಟೋ ಅನುಕೂಲವಾಗುತ್ತದೆ.

ತರಕಾರಿ ಹೆಚ್ಚಿ ಕೊಡುವುದು , ಕಾಯಿ ತುರಿದು ಕೊಡುವುದು, ಬಾಕ್ಸಿಗೆ ರೆಡಿ ಮಾಡಿ ಕೊಡುವುದು... ಇವೆಲ್ಲ ನಿಮ್ಮ ಸಮಯದ ಉಳಿತಾಯವಲ್ಲದೇ.. ಕೆಲಸದ ಭಾರ ಕಡಿಮೆಯಾಗುತ್ತದೆ.

ಕೂಡು ಕುಟುಂಬದಲ್ಲಿ ಕೆಲವು ಅತ್ತೆಯರಿಗೆ, ಎಲ್ಲವೂ ತಾನು ಹೇಳಿದಂತೆ ನಡೆಯಬೇಕೆನ್ನುವ ಸ್ವಭಾವ ಇರುತ್ತದೆ. ಜಾಣ ಸೊಸೆಯರಿದ್ದರೆ, ಅತ್ತೆಯ ಮನಸ್ಸಿನ ವಿಚಾರವನ್ನು ತಿಳಿದುಕೊಂಡು ನಿಮ್ಮ ಪಕ್ಷಕ್ಕೆ ಮಾಡಿಕೊಂಡರೆ ಅರ್ಧ ಕಷ್ಟ ಪರಿಹಾರವಾಗಿ ಬಿಡುತ್ತದೆ.

ಕೂಡು ಕುಟುಂಬದಲ್ಲಿ ಕೆಲವು ಅತ್ತೆಯರಿಗೆ, ಎಲ್ಲ ನಾನು ಹೇಳಿದಂತೆ ನಡೆಯಬೇಕೆನ್ನುವ ಸ್ವಭಾವ ಇರುತ್ತದೆ. ಜಾಣ ಸೊಸೆಯರಿದ್ದರೆ, ಅತ್ತೆಯ ಮನಸ್ಸಿನ ವಿಚಾರವನ್ನು ತಿಳಿದುಕೊಂಡು ನಿಮ್ಮ ಪಕ್ಷಕ್ಕೆ ಮಾಡಿಕೊಂಡರೆ, ನಿಮಗೆ ಅರ್ಧ ಕಷ್ಟ ಪರಿಹಾರವಾಗಿ ಬಿಡುತ್ತದೆ. ಕೆಲವು ಸಂದರ್ಭದಲ್ಲಿ ನಿಮ್ಮ ಅತ್ತೆಯೋ, ಮಾವನೋ ಕೊಂಚ ಒರಟಾಗಿ ಮಾತಾಡಿರಬಹುದು. ಆದರೆ ಅದರಲ್ಲಿ ಏನೂ ಇರುವುದಿಲ್ಲ. ಅದರ ಭಾವ ಇಷ್ಟೆ.. ನಿನ್ನೆ ಮೊನ್ನೆ ಬಂದವಳು. ನಾನು ಈ ಸಂಸಾರಕ್ಕೆ ಎಷ್ಟು ಜೀವ ತೇದಿದ್ದೇನೆ. ಈ ಮಟ್ಟಕ್ಕೆ ತರಲು ಕಷ್ಟಪಟ್ಟಿರುವೆ. ನಮ್ಮ ಮಾತಿಗೆ ಒಂದು ಮನ್ನಣೆ ನೀಡುತ್ತಿಲ್ಲ ಎಂಬ ಅಸಮಾಧಾನವನ್ನು ತೋಡಿಕೊಂಡಿರುತ್ತಾರೆ ಅಷ್ಟೇ.. ಮನಸ್ಸಿನಲ್ಲಿ ನಿಮ್ಮ ಬಗ್ಗೆ ಅಭಿಮಾನ, ಪ್ರೀತಿ ಗುಪ್ತವಾಗಿ ಹರಿಯುತ್ತಿರುತ್ತದೆ. ಅದನ್ನು ಗುರುತಿಸುವ ಜಾಣ್ಮೆ ನಿಮ್ಮಲ್ಲಿರಬೇಕು ಅಷ್ಟೆ.

ಈ ಅನುಭವ ನೀವು ಅತ್ತೆಯಾದಾಗ ಅರಿವಿಗೆ ಬರುತ್ತದೆ. ಇನ್ನು ನಿಮ್ಮ ಗಂಡನೂ ಅಷ್ಟೇ; ಇದುವರೆಗೆ ಅಮ್ಮನ ಮುದ್ದಿನ ಕೂಸಾಗಿದ್ದ. ಅವನು ಹೇಳಿದ್ದೆಲ್ಲ ಸುಪ್ರೀಂನಂತೆ, ನಿಮ್ಮ ಅತ್ತೆ ಮಮತೆಯಿಂದ ಮಾಡಿ ಬಿಡುತ್ತಿದ್ದರು. ಇದು ನಿಮ್ಮ ಮುಂದೆ ನಡೆಯಲಾರದಾಗ ಅವನಿಗೆ ಅಸಮಾಧಾನವಾಗಿರುತ್ತದೆ. ನಿಮಗೆ ಬೇಜಾರು ಆಗಿರುತ್ತದೆ ಇದು ಸಹಜವೇ.. ಈ ಸೈಕಾಲಜಿಯನ್ನು ನೀವು ತಿಳಿದುಕೊಂಡು ಅವನಿಗೆ ಸಂಸಾರದ ಪಾಠವನ್ನು ಹೇಳಿಕೊಡಬೇಕು. ಆ ಶಕ್ತಿ ಇರುವುದು ಪತ್ನಿಗೆ ಮಾತ್ರ! ಚಿಕ್ಕ ಚಿಕ್ಕ ವಿಷಯಗಳಿಗೂ ನೀವಿಬ್ಬರೂ ತೀರ್ಮಾನಕ್ಕೆ ಬರಲಾಗದೆ ಹೋದರೆ, ಆ ಚಿಕ್ಕ ಸಮಸ್ಯೆಯೇ ದೊಡ್ಡದಾಗುತ್ತದೆ. ಈ ಸಮಸ್ಯೆಯಿಂದ ನೀವು ಮುನಿಸಿಕೊಂಡರೆ, ಹೆತ್ತವರಿಗೆ ಆಗುವ ಸಂಕಟ, ಅಶಾಂತಿ ಅಷ್ಟಿಷ್ಟಲ್ಲ.. ಇದೇ ರೀತಿ ಮುಂದುವರೆದರೆ, ಸಂಸಾರದಲ್ಲಿ ಅಪಸ್ವರ ಏಳುತ್ತದೆ.

ನಮ್ಮ ರಕ್ತದಲ್ಲಿ ಭಾರತೀಯ ಸಂಸ್ಕಾರವಿದೆ. ದಾಂಪತ್ಯ, ಕುಟುಂಬ ಇತ್ಯಾದಿ ಸಂಸ್ಕಾರಗಳಲ್ಲಿ ನಾವು ಜಗತ್ತಿಗೆ ಮಾದರಿಯಾಗಿದ್ದೇವೆ. ನಮ್ಮನ್ನು ನೋಡಿ ವಿದೇಶಿಯರು ಆಶ್ಚರ್ಯಪಟ್ಟು, ನಮ್ಮ ನೈತಿಕತೆಗೆ ಕೈ ಮುಗಿಯುತ್ತಿದ್ದಾರೆ. ಹೀಗಿರುವಾಗ ಸಣ್ಣ ಸಣ್ಣ ಕಾರಣಗಳಿಗೂ ಮನಸ್ಸು ಕೆಡಿಸಿಕೊಂಡು ಸಂಸಾರವನ್ನು ಸಾರ ಇಲ್ಲದಂತೆ ಮಾಡಿಕೊಳ್ಳಬಾರದು. ಮನೆಯ ಹಿರಿಯರು, ಆಗಾಗ್ಗೆ ತಮ್ಮ ಮಕ್ಕಳಿಗೆ ಸೂಕ್ಷ್ಮವಾಗಿ ಸಲಹೆ ಸೂಚನೆ, ನೀಡುತ್ತಾ ಭವಿಷ್ಯದ ಜೀವನಗಳನ್ನು ಮನದಟ್ಟು ಮಾಡಿಕೊಡಬೇಕು. ಹೆಣ್ಣಿನ ಕೈಯಲ್ಲೇ ಒಂದು ಸಂಸಾರ ನಿಲ್ಲಿಸುವ ಅಥವಾ ಬೀಳಿಸುವ ಶಕ್ತಿ ಇದೆ. ಯಾವುದೇ ಸಮಸ್ಯೆಯಾಗಲಿ ಹೆಂಡತಿಯಾದವಳು ಭೂತ ಕನ್ನಡಿಯಿಂದ ನೋಡದಿರುವುದು ಬಹಳ ಒಳ್ಳೆಯದು. ಸಮಚಿತ್ತದಿಂದ ಚರ್ಚಿಸುತ್ತ ಪರಿಹಾರ ಕಂಡುಕೊಳ್ಳುವ ಬುದ್ಧಿವಂತಿಕೆ ಹೆಣ್ಣಿಗೆ ಮಾತ್ರ ಇರುತ್ತದೆ. ಇದು ದೈವದತ್ತವಾದುದು. ಆಗಲೇ ಸಂಸಾರದ ಸಮಸ್ಯೆ ಸುಲಭವಾಗಿ ಪರಿಹಾರವಾಗಿ ಬಾಳು ನಂದಗೋಕುಲವಾಗಿರುತ್ತದೆ.